ಕೇಂದ್ರದ ಆಡಳಿತ ಮಂಡಳಿಯ ಸದಸ್ಯರಿಗಿದೆ. ಜಿಲ್ಲಾ ಪಂಚಾಯತ್ ದಿಂದ ನೇರವಾಗಿ ನಿರ್ಮಿತಿ ಕೇಂದ್ರಕ್ಕೆ ಹಣ ಮಂಜೂರು ಮಾಡಬಹುದು.

ಈ) ಆಯಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಣೆ ಅಧಿಕಾರಿಗಳು ತಾವೇ ಖುದ್ದಾಗಿ ಅಭಿವೃದ್ಧಿ ಕಾರ್ಯವನ್ನು ನಿರ್ಮಿತಿ ಕೇಂದ್ರಕ್ಕೆ ವಹಿಸಿದ್ದರ ಕಾಮಗಾರಿಯನ್ನು ಪರಿಶೀಲಿಸುವ ಅಧಿಕಾರ ಅವರಿಗೆ ಇರುತ್ತದೆ.

ಉ) ಕಳೆದ ಮೂರು ವರ್ಷಗಳಲ್ಲಿ ಬಿಜಾಪುರ ನಿರ್ಮಿತಿ ಕೇಂದ್ರವು ಸ್ವಚ್ಚಗ್ರಾಮ ಹೊರತುಪಡಿಸಿ ಯಾವುದೇ ಕಾಮಗಾರಿಗಳನ್ನು ಬಿಜಾಪುರ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿ ನಿರ್ವಹಿಸಿರುವುದಿಲ್ಲ. ಸ್ವಚ್ಚಗ್ರಾಮ ಕಾಮಗಾರಿಯ ಉದ್ದುವಾರಿಗೆ ಒಂದು ಸಮಿತಿಯಿದ್ದು ಅದರಲ್ಲಿ ಸಹಾಯಕ ನಿರ್ದೇಶಕರು, ಕರ್ನಾಟಕ ಭೂ ಸೇನಾ ನಿಗಮ ಹಾಗೂ ಇತರೆ ಸದಸ್ಯರಿರುತ್ತಾರೆ. ಈ ಸಮಿತಿಯ ಕಾಮಗಾರಿಯನ್ನು ವೀಕ್ಷಿಸಿದ ಬಳಿಕ ಹಣವನ್ನು ಪಾವತಿ ಮಾಡಲು ಸೂಚಿಸುತ್ತದೆ.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಪ್ರೌಢ ಮತ್ತು ಪ್ರಾಥಮಿಕ ಶಾಲೆಗಳಲ್ಲಿನ ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

4555 (5148) : ಶ್ರೀ ಪ್ರಭಾಕರ ಬರಿಗೇರ ಕೆ. (ಬೆಳ್ತಂಗಡಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಪ್ರೌಢ ಮತ್ತು ಪ್ರಾಥಮಿಕ ಶಾಲೆಗಳಲ್ಲಿರುವ ಒಟ್ಟು ಶಿಕ್ಷಕರುಗಳ ಹುದ್ದೆಗಳೆಷ್ಟು; ಎಷ್ಟು ಹುದ್ದೆಗಳು ಶಾಲೆ ಇವೆ;

ಆ) ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ಶ್ರೀ ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಬೆಳ್ತಂಗಡಿ ತಾಲ್ಲೂಕಿನ ಪ್ರಾಥಮಿಕ ಶಾಲೆಗಳಲ್ಲಿ ಒಟ್ಟು 872 ಹುದ್ದೆಗಳೆಷ್ಟು. ಇದರಲ್ಲಿ 256 ಹುದ್ದೆಗಳು ಖಾಲಿ ಇರುತ್ತದೆ. ಪ್ರೌಢ ಶಾಲೆಗಳಲ್ಲಿ ಒಟ್ಟು 526 ಹುದ್ದೆಗಳಿದ್ದು, ಇದರಲ್ಲಿ 74 ಹುದ್ದೆಗಳು ಖಾಲಿ ಇದೆ.

ಆ) ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ತುಂಬಲಾಗುವುದು.

ಗ್ರಂಥಾಲಯ ಇಲಾಖೆಯಲ್ಲಿನ ಮುಖ್ಯ ಗ್ರಂಥಾಧಿಕಾರಿಗಳ ಹುದ್ದೆ ಬಗ್ಗೆ

4556 (5149) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ವಯಸ್ಕರ ಶಿಕ್ಷಣ ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಮುಖ್ಯ ಗ್ರಂಥಾಲಯಾಧಿಕಾರಿಗಳಾಗಿ ನಿಯಮ 32ರ ಅನ್ವಯ ಹಾಗೂ 68ರ ಅಡಿಯಲ್ಲಿ ರಾಜ್ಯದಲ್ಲಿ ಯಾವ ಯಾವ ಜಿಲ್ಲೆಯಲ್ಲಿ ನೇಮಿಸಲಾಗಿದೆ.

ಆ) ನೇಮಕಗೊಳಿಸುವ ಬಗ್ಗೆ ಅವರಿಗೆ ಜೇಷ್ಯತೆ ಹಾಗೂ ಯಾವ ವಿದ್ಯಾರ್ಹತೆ ನಿಗಧಿಪಡಿಸಲಾಗಿದೆ;

ಇ) ಅವರುಗಳು ಸಲ್ಲಿಸಿರುವ ಸೇವಾ ಅವಧಿ ವಿವರ ಏನು?

ಶ್ರೀ ಬಾಬುರಾವ್ ಚವ್ಹಾಣ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ) ನಿಯಮ 32ರಲ್ಲಿ ನೇಮಿಸಿಲ್ಲ. ನಿಯಮ 68 ರಡಿಯಲ್ಲಿ 17 ಮಂದಿಯನ್ನು ನೇಮಿಸಿದೆ. ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಆ) ಇಲಾಖೆಯ ವ್ಯಂದ ಮತ್ತು ನೇಮಕಾತಿ ನಿಯಮಾವಳಿಯ ಪ್ರಕಾರ ಮುಖ್ಯಗ್ರಂಥಾಲಯ ಅಧಿಕಾರಿಗಳ ಹುದ್ದೆಗೆ ನೇಮಕಗೊಳ್ಳಲು ಅಂಗೀಕೃತ ಪದವಿ ಜೊತೆಗೆ ಬಿ.ಲಿಬ ಸೈನ್ಸ್ ವಿದ್ಯಾರ್ಹತೆ ನಿಗಧಿಪಡಿಸಲಾಗಿದೆ.

ಇ) ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ನಿಯಮ 68ರ ಅಡಿಯಲ್ಲಿ ಪ್ರಭಾರ ಮುಖ್ಯ ಗ್ರಂಥಾಲಯಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿರುವ ಗ್ರಂಥಪಾಲಕರ ಪಟ್ಟಿ.

ಕ್ರ. ಸಂ.	ಗ್ರಂಥಪಾಲಕರ ಹೆಸರು	ಕಾರ್ಯನಿರ್ವಹಿಸುತ್ತಿರುವ ಸ್ಥಳ	ದಿನಾಂಕ 30.7.2003 ರಲ್ಲಿದ್ದಂತೆ ಸೇವಾವಧಿ
1	ಶ್ರೀ ಆರ್. ಬಿ. ಪಾಟೀಲ್	ಜಿಲ್ಲಾ ಕೇಂದ್ರ ಗ್ರಂಥಾಲಯ, ಚಿತ್ರದುರ್ಗ	24 ವರ್ಷ
2	ಶ್ರೀ ಯು.ಎಸ್. ಇಂಚಲ್	ಜಿಲ್ಲಾ ಕೇಂದ್ರ ಗ್ರಂಥಾಲಯ, ಕೋಲಾರ	24 ವರ್ಷ
3	ಶ್ರೀ ಎಸ್.ಬಿ. ಗೋಡಿ	ಜಿಲ್ಲಾ ಕೇಂದ್ರ ಗ್ರಂಥಾಲಯ, ಹಾವೇರಿ	24 ವರ್ಷ
4	ಶ್ರೀ ಎಸ್.ಎಂ. ಬೈರನಟ್ಟಿ	ಜಿಲ್ಲಾ ಕೇಂದ್ರ ಗ್ರಂಥಾಲಯ, ಮಂಗಳೂರು ಹೆಚ್ಚುವರಿಯಾಗಿ ಅದೇ– ಉಡುಪಿ	24 ವರ್ಷ
5	ಶ್ರೀ ಎಸ್.ಎ. ಹಿರೇಮಠ	ಜಿಲ್ಲಾ ಕೇಂದ್ರ ಗ್ರಂಥಾಲಯ, ಬಳ್ಳಾರಿ	24 ವರ್ಷ
6	ಶ್ರೀ ಎಸ್.ಎ. ಪಾಟೀಲ್	ಜಿಲ್ಲಾ ಕೇಂದ್ರ ಗ್ರಂಥಾಲಯ, ಗುಲ್ಬರ್ಗಾ	24 ವರ್ಷ
7	ಶ್ರೀ ಎ.ಬಿ. ಭೂಮಣ್ಣವರ್	ಜಿಲ್ಲಾ ಕೇಂದ್ರ ಗ್ರಂಥಾಲಯ, ಗದಗ	24 ವರ್ಷ
8	ಶ್ರೀ ಎಸ್.ಎಚ್. ದಿಡ್ಡಿಬಾಗಿಲ್	ಜಿಲ್ಲಾ ಕೇಂದ್ರ ಗ್ರಂಥಾಲಯ, ಕೊಪ್ಪಳ	18 ವರ್ಷ
9	ಶ್ರೀ ಆರ್. ಕೆ. ರಾಮೇಗೌಡ	ಜಿಲ್ಲಾ ಕೇಂದ್ರ ಗ್ರಂಥಾಲಯ, ಚಾಮರಾಜನಗರ	24 ವರ್ಷ
10	ಶ್ರೀ ಆರ್. ಎಸ್. ಮಠಪತಿ	ಜಿಲ್ಲಾ ಕೇಂದ್ರ ಗ್ರಂಥಾಲಯ, ರಾಯಚೂರು	24 ವರ್ಷ
11	ಶ್ರೀ ಎ.ಎಸ್. ನಾಡಿಗೇರ	ಜಿಲ್ಲಾ ಕೇಂದ್ರ ಗ್ರಂಥಾಲಯ, ಮಡಿಕೇರಿ	24 ವರ್ಷ
12	ಶ್ರೀ ಎ.ಎಲ್. ಹಳ್ಳೂರ	ನಗರ ಕೇಂದ್ರ ಗ್ರಂಥಾಲಯ, ಗುಲ್ಬರ್ಗಾ	24 ವರ್ಷ

1	2	3	4
13	ಶ್ರೀ ಪಿ.ಎಸ್. ಯರಗಟ್ಟಿ	ಜಿಲ್ಲಾ ಕೇಂದ್ರ ಗ್ರಂಥಾಲಯ, ಕಾರವಾರ	24 ವರ್ಷ
14	ಶ್ರೀ ಡಿ.ಹೆಚ್. ಕೇಸರಿ	ಜಿಲ್ಲಾ ಕೇಂದ್ರ ಗ್ರಂಥಾಲಯ, ಬೀದರ್	6 ವರ್ಷ
15	ಶ್ರೀ ಎಂ.ಟಿ. ಹಿರಂಡಗಿ	ಜಿಲ್ಲಾ ಕೇಂದ್ರ ಗ್ರಂಥಾಲಯ, ವಿಜಾಪುರ	24 ವರ್ಷ
16	ಶ್ರೀ ಜಿ.ಸಿ. ನೇಕಾರ	ರಾಜ್ಯ ಕೇಂದ್ರ ಗ್ರಂಥಾಲಯ, ಬೆಂಗಳೂರು	24 ವರ್ಷ
17	ಶ್ರೀ ಕೆಂಪಯ್ಯ	ಜಿಲ್ಲಾ ಕೇಂದ್ರ ಗ್ರಂಥಾಲಯ, ಮೈಸೂರು	24 ವರ್ಷ

ಗ್ರಂಥಾಲಯ ಇಲಾಖೆಯಲ್ಲಿ ಉನ್ನತೀಕರಣಗೊಳಿಸಲಾಗಿರುವ ಹುದ್ದೆಗಳು

4557 (5150) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಂಥಾಲಯ ಇಲಾಖೆಯಲ್ಲಿ ಉನ್ನತೀಕರಣಗೊಳಿಸಲಾಗಿರುವ ಗ್ರಂಥಾಲಯ ಸಹಾಯಕ ಹಾಗೂ ಗ್ರಂಥಾಲಯ ಸಹವರ್ತಿ ಹುದ್ದೆಗಳೆಷ್ಟು;

ಆ) ಗ್ರಂಥಾಲಯ ಸಹಾಯಕ ಹುದ್ದೆಯನ್ನು ಉನ್ನತೀಕರಣಗೊಳಿಸುವ ಬಗ್ಗೆ ಕೆಲವೊಂದು ಕಾರಣ ಹೇಳಿ ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಯಾವ ಕಾರಣಕ್ಕಾಗಿ ತಡೆಹಿಡಿಯಲಾಗಿದೆ;

ಈ) ಈ ಕುರಿತು ತೆಗೆದುಕೊಳ್ಳಲಾಗುವ ಕ್ರಮಗಳೇನು; (ವಿವರ ನೀಡುವುದು)?

ಶ್ರೀ ಬಾಬುರಾವ್ ಚವ್ಹಾಣ (ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ) ಗ್ರಂಥಾಲಯ ಸಹವರ್ತಿಗಳ 80 ಹಾಗೂ ಗ್ರಂಥಾಲಯ ಸಹಾಯಕರ 112 ಹುದ್ದೆಗಳನ್ನು ಉನ್ನತೀಕರಿಸಲಾಗಿದೆ.

ಆ) ಇ) ಈ) ಪ್ರಶ್ನೆ ಆ)ಗೆ ನೀಡಿದ ಉತ್ತರದ ಹಿನ್ನಲೆಯಲ್ಲಿ, ಅಂದರೆ, ಈಗಾಗಲೇ ಉನ್ನತೀಕರಿಸಿರುವುದರಿಂದ, ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಖಾಲಿ ಇರುವ ಗ್ರಂಥಾಲಯಾಧಿಕಾರಿಗಳ ಹುದ್ದೆಗಳು

4558 (5151) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?